**ದಿನಾಂಕ: 13–10–2011 ರಂದು ಬೆಳಿಗ್ಗೆ 11.00 ಘಂಟೆಗೆ ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಹಾಗೂ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು | | | ಹಾಜರಿದ್ದ ಅಧಿಕಾರಿಗಳು | | |
|---|---|---|---|---|---|
| ಶ್ರೀಯುತರಾದ : | | | ಶ್ರೀಯುತರಾದ | | |
| 1 | ರ.ಆಂಜನಪ್ಪ | ಅಧ್ಯಕ್ಷರು | 1 | ಎಸ್.ರಾಜಾರಾಂ | ಕೌನ್ಸಿಲ್ ಕಾರ್ಯದರ್ಶಿ |
| 2 | ಎನ್.ಶಕುಂತಲ | ಸದಸ್ಯರು | 2 | ಡಾ॥ನಂದಕುಮಾರ್.ಜಿ.ವಿ. | ಮುಖ್ಯ ಲೆಕ್ಕಾಧಿಕಾರಿ |
| 3 | ಬಿ.ಆರ್.ಚಂದ್ರಶೇಖರ್ | ಸದಸ್ಯರು | 3 | ಬಿ.ಎಸ್.ಶಿವಪ್ಪ | ಉಪ ವಲಯ ಅರಣ್ಯಾಧಿಕಾರಿ(ರಾ.ರಾ.ನಗರ) |
| 4 | ಆರ್.ಎಸ್.ಸತ್ಯನಾರಾಯಣ್ | ಸದಸ್ಯರು | 4 | ಸೀನಪ್ಪ | ಉಪ ವಲಯ ಅರಣ್ಯಾಧಿಕಾರಿ (ಮ.ಪುರ) |
| 5 | ಎಸ್.ಕೇಶವಮೂರ್ತಿ | ಸದಸ್ಯರು | 5 | ರಾಜಶೇಖರಯ್ಯ | ಉಪ ಅರಣ್ಯ ಸಂರಕ್ಷಣಾಧಿಕಾರಿ (ಪೂರ್ವ) |
| 6 | ಅಶ್ವಥ್‌ನಾರಾಯಣ.ಜಿ.ಎ. | ಸದಸ್ಯರು | 6 | ಎಂ.ಕೃಷ್ಣಪ್ಪ | ಉಪ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ) |
| 7 | ಎಸ್.ವಿಜಯನ್ | ಸದಸ್ಯರು | 7 | ಕೆ.ಪುರುಷೋತ್ತಮ್ | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ) |
| 8 | ನಿರ್ಮಲ | ಸದಸ್ಯರು | 8 | ಎಂ.ಬಿ.ವೆಂಕಟೇಶಪ್ಪ | ಸ.ಅ.ಸಂ. ಉಪ ವಿಭಾಗ–2) |
| 9 | ಹೆಚ್.ಎನ್.ಗಂಗಾಧರ್ | ಸದಸ್ಯರು | 9 | ಆರ್.ರಾಮಚಂದ್ರ | ವಲಯ ಅರಣ್ಯಾಧಿಕಾರಿ(ಪಶ್ಚಿಮ,ದಕ್ಷಿಣ) |
| | | | 10 | ಎಂ.ನಾಗರಾಜ್ | ವಲಯ ಅರಣ್ಯಾಧಿಕಾರಿ(ಪೂರ್ವ) |
| | | | 11 | ಎಲ್.ನಂದೀಶ್ | ವಲಯ ಅರಣ್ಯಾಧಿಕಾರಿ(ಬೊಮ್ಮನಹಳ್ಳಿ) |
| | | | 12 | ಕೆ.ಎಸ್.ನಾಗರಾಜ್ | ವಲಯ ಅರಣ್ಯಾಧಿಕಾರಿ(ದಾಸರಹಳ್ಳಿ) |
| | | | 13 | ಡಿ.ಎಂ.ಸುಬ್ಬಣ್ಣ | ತೋಟಗಾರಿಕೆ ಅಧೀಕ್ಷಕರು (ದಕ್ಷಿಣ–2) |
| | | | 14 | ಓಂಪ್ರಕಾಶ್.ಕೆ. | ತೋಟಗಾರಿಕೆ ಅಧೀಕ್ಷಕರು (ರಾ.ರಾ.ನಗರ) |
| | | | 15 | ಮಹಮ್ಮದ್ ಅಲಿ | ತೋಟಗಾರಿಕೆ ಅಧೀಕ್ಷಕರು (ಯಲಹಂಕ) |
| | | | 16 | ಹೆಚ್.ವಿ.ರವೀಂದ್ರ | ತೋಟಗಾರಿಕೆ ಅಧೀಕ್ಷಕರು (ಮಹದೇವಪುರ) |
| | | | 17 | ಎಸ್.ಚಂದ್ರಶೇಖರ್ | ತೋ.ಅ.(ಪೂರ್ವ & ದಾಸರಹಳ್ಳಿ) |
| | | | 18 | ನಾಗಪ್ಪ ಅಟ್ಟೂರಕರ್ | ತೋಟಗಾರಿಕೆ ಅಧೀಕ್ಷಕರು **(ದಕ್ಷಿಣ–1)** |
| | | | 19 | ಕೆ.ಎಸ್.ಶಿವಪ್ರಸಾದ್ ರೆಡ್ಡಿ | ತೋಟಗಾರಿಕೆ ಅಧೀಕ್ಷಕರು **(ಪಶ್ಚಿಮ)** |
| | | | 20 | ಬಿ.ಸಿ.ಆನಂದ | ತೋಟಗಾರಿಕೆ ಅಧೀಕ್ಷಕರು **(ಬೊಮ್ಮನಹಳ್ಳಿ)** |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಮಾನ್ಯ ಆಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತ ಕೋರಿ ಮಾತನಾಡುತ್ತಾ, ಮಳೆಗಾಲ ಮುಗಿಯುತ್ತಾ ಬರುತ್ತಿರುವ ಹಿನ್ನೆಲೆಯಲ್ಲಿ, ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಬದಿ ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಜರೂರಾಗಿ ಹಮ್ಮಿಕೊಳ್ಳುವಂತೆ ಆಯುಕ್ತರು ಕೋರಿರುವ ಮೇರೆಗೆ ಈ ಒಂದು ವಿಶೇಷ ಸಭೆಯನ್ನು ಕರೆಯಲಾಗಿದೆಯೆಂದು ತಿಳಿಸಿದರು.

2010–11ನೇ ಸಾಲಿನಲ್ಲಿ ಪ್ರಗತಿಯಲ್ಲಿರುವ ಉದ್ಯಾನವನಗಳ ಕಾಮಗಾರಿ ವಿವರಗಳ ಬಗ್ಗೆ ಸಮಿತಿಯ ಪರಿಶೀಲನೆಗೆ ಮಾಹಿತಿ ನೀಡುವಂತೆ ಕೋರಿ ತೋಟಗಾರಿಕೆ ಅಧೀಕ್ಷಕರುಗಳಿಗೆ ಹಾಗೂ ಮುಖ್ಯ ಲೆಕ್ಕಾಧಿಕಾರಿಗಳಿಗೆ ಪತ್ರ ಬರೆಯಲಾಗಿದ್ದು, ಪ್ರಗತಿಯಲ್ಲಿ ಯಾವುದೇ ಉದ್ಯಾನವನಗಳ ಕಾಮಗಾರಿಗಳು ಇರುವುದಿಲ್ಲವೆಂದು ಅಧಿಕಾರಿಗಳು ವರದಿ ನೀಡಿರುತ್ತಾರೆ. ಆದರೆ, ಪ್ರಸಕ್ತ, ರೂ.4.97,00,000=00 ಗಳು ಬಾಕಿ ಬಿಲ್ಲು ಇರುವುದು ಸಮಿತಿಯ ಗಮನಕ್ಕೆ ಕಂಡು ಬಂದಿದ್ದು, ಈ ಬಗ್ಗೆ ಅಧಿಕಾರಿಗಳು ಸ್ಪಷ್ಟೀಕರಣ ನೀಡುವಂತೆ ಸೂಚಿಸಿದರು.

**ಮುಂದುವರೆದಿದೆ. . . .**

ವೃಕ್ಷಕವಚ ನಿರ್ವಹಣೆ, ನೆಡುತೋಪು ಮತ್ತು ಮರ ಕತ್ತರಿಸುವ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ, ಟೆಂಡರ್ ಕರೆದು, ಸಮಿತಿಯ ಅನುಮೋದನೆ ಪಡೆಯದೆ ಗುತ್ತಿಗೆದಾರರಿಗೆ ಕೆಲಸದ ಆದೇಶ ನೀಡಿರುವುದು ಕಂಡು ಬಂದಿದ್ದು, ಈ ಬಗ್ಗೆ ಮಾಹಿತಿ ನೀಡಲು ಹಾಗೂ ಸಂಬಂಧಪಟ್ಟ ಕಡತವನ್ನು ಸಮಿತಿಯ ಪರಿಶೀಲನೆಗೆ ಒದಗಿಸಲು ಉಪ ಅರಣ್ಯ ಸಂರಕ್ಷಣಾಧಿಕಾರಿ(ಉತ್ತರ ಮತ್ತು ದಕ್ಷಿಣ) ಸೂಚಿಸಿದರು.

ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರಕ್ಕೆ ಸಂಬಂಧಪಟ್ಟಂತೆ ಮುಖ್ಯಲೆಕ್ಕಾಧಿಕಾರಿಗಳ ಕಛೇರಿಯಲ್ಲಿರುವ ಬಾಕಿ ಬಿಲ್ಲಿನ ವಿವರಗಳ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.

**ಮುಖ್ಯ ಲೆಕ್ಕಾಧಿಕಾರಿಗಳು** ಮಾತನಾಡುತ್ತಾ, ವಾರ್ಡ್ ಮಟ್ಟದ ಕಾಮಗಾರಿ ಸ್ಥಾಯಿ ಸಮಿತಿಯ ಅಧ್ಯಕ್ಷರು ಸಿವಿಲ್ ಕಾಮಗಾರಿಗಳ ಡಿ.ಸಿ.ಬಿಲ್ಲುಗಳನ್ನು ತಡೆಹಿಡಿಯಲು ಆದೇಶ ನೀಡಿದ್ದು, ಅದರಲ್ಲಿ ತೋಟಗಾರಿಕೆ, ವಿದ್ಯುತ್, ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆಗೆ ಸಂಬಂಧಪಟ್ಟಂತಹ ಕಾಮಗಾರಿಗಳು, ಸಿವಿಲ್ ಕಾಮಗಾರಿಗಳಲ್ಲಿ ಸೇರಿಸಿರುವುದರಿಂದ ಡಿ.ಸಿ.ಬಿಲ್ಲುಗಳನ್ನು ನೀಡಿರುವುದಿಲ್ಲವೆಂದು ತಿಳಿಸಿದರು.

**ಅಧ್ಯಕ್ಷರು,** ತೋಟಗಾರಿಕೆ ಮತ್ತು ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆಗೆ ಸಂಬಂಧಪಟ್ಟ ಬಿಲ್ಲುಗಳನ್ನು ಸಿವಿಲ್ ಕಾಮಗಾರಿಗಳ ಜೊತೆ ಸೇರಿಸಬಾರದೆಂದು, ಅವುಗಳಿಗೆ ಪ್ರತ್ಯೇಕವಾಗಿ ಪೇಮೆಂಟ್ ಮಾಡುವಂತೆ ತಿಳಿಸಿದರು.

**ಶ್ರೀಮತಿ.ಶಕುಂತಲಾ,** ಸದಸ್ಯರು ಮಾತನಾಡುತ್ತಾ, ಮಾರೇನಹಳ್ಳಿ ವಾರ್ಡ್ ನಂ.125, ಮೊದಲಿಗೆ ದಕ್ಷಿಣ ವಲಯ ವ್ಯಾಪ್ತಿಗೆ ಒಳಪಟ್ಟಿದ್ದು, ಈಗ ಪಶ್ಚಿಮ ವಲಯಕ್ಕೆ ಸೇರಿದ್ದು, ಈ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳಲ್ಲಿ ಯಾವುದೇ ಅಭಿವೃದ್ಧಿ ಹಾಗೂ ನಿರ್ವಹಣೆ ಕಾರ್ಯ ಸಮರ್ಪಕವಾಗಿಲ್ಲವೆಂದು, ಸಂಬಂಧಪಟ್ಟ ತೋಟಗಾರಿಕೆ ಅಧೀಕ್ಷಕರು ವಾರ್ಡ್‌ನಲ್ಲಿರುವ ಉದ್ಯಾನವನಗಳಿಗೆ ಒಮ್ಮೆಯೂ ಭೇಟಿ ನೀಡಿರುವುದು ಕಂಡು ಬಂದಿಲ್ಲವೆಂದು, ಅಧಿಕಾರಿಗಳು ಉದ್ಯಾನವನಗಳ ತಪಾಸಣೆ ಕಾರ್ಯ ಕೈಗೊಂಡಾಗ ಸಂಬಂಧಪಟ್ಟ ವಾರ್ಡ್ ಸದಸ್ಯರ ಗಮನಕ್ಕೆ ತಂದು, ಅವರೊಂದಿಗೆ ತಪಾಸಣೆ ಕಾರ್ಯ ಕೈಗೊಳ್ಳಬೇಕೆಂದು ಸಲಹೆ ನೀಡಿದರು.

**ಶ್ರೀ.ವಿಜಯನ್, ಸದಸ್ಯರು** ಮಾತನಾಡುತ್ತಾ, ವಾರ್ಡ್ ನಂ.115, ವನ್ನಾರಪೇಟೆ ವ್ಯಾಪ್ತಿಯಲ್ಲಿ ಬರುವ, ಸಾರ್ವಜನಿಕರ ಮನವಿಯ ಮೇರೆಗೆ ಅಪಾಯಕಾರಿ ಹಾಗೂ ಒಣಗಿದ ಮರದ ಕೊಂಬೆಗಳನ್ನು ಕತ್ತರಿಸಲು ಕ್ರಮ ತೆಗೆದುಕೊಳ್ಳುವಂತೆ ಹಲವಾರು ಬಾರಿ ಪತ್ರ ಮುಖೇನ ಹಾಗೂ ಮೌಖಿಕವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರೂ ಸಹ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲವೆಂದು ಅಧ್ಯಕ್ಷರಲ್ಲಿ ಮನವಿ ಮಾಡಿದರು.

**ಅಧ್ಯಕ್ಷರು** ಮಾತನಾಡುತ್ತಾ, ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಉದ್ಯಾನವನಗಳಲ್ಲಿ ಕಾಲ ಕಾಲಕ್ಕೆ ನಿರ್ವಹಣೆ ಮತ್ತು ಅಭಿವೃದ್ಧಿ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಿಕೊಂಡು ಹೋಗುವಂತೆ ಹಾಗೂ ಸದಸ್ಯರುಗಳು ಸೂಚಿಸುವ ಕೆಲಸ ಕಾರ್ಯಗಳ ಬಗ್ಗೆ ಹೆಚ್ಚಿನ ಗಮನಹರಿಸುವಂತೆ ಹಾಗೂ ಇನ್ನು ಮುಂದೆ ಈ ರೀತಿಯ ದೂರುಗಳಿಗೆ ಅಸ್ಪದ ಕೊಡದಂತೆ, ಕೆಲಸಕಾರ್ಯಗಳನ್ನು ನಿರ್ವಹಿಸಬೇಕೆಂದು ತೋಟಗಾರಿಕೆ ಅಧೀಕ್ಷಕರುಗಳಿಗೆ ಸೂಚಿಸಿದರು.

ಅಧ್ಯಕ್ಷರು ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

**1. ವಿಷಯ ಸಂಖ್ಯೆ:ತೋ/ಸ್ಥಾ/ಸ/17/11-12, ದಿನಾಂಕ: 12-08-2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ.151, ಕೋರಮಂಗಲದ ಲಕ್ಷ್ಮೀದೇವಿ ಉದ್ಯಾನವನದಲ್ಲಿ ಬೆಳಿಗ್ಗೆ 10.00 ಗಂಟೆ ರಿಂದ ಸಂಜೆ 4.00 ಗಂಟೆವರೆಗೆ ಪ್ರತಿ ವ್ಯಕ್ತಿಗೆ ರೂ.2.00 ರಂತೆ ಪ್ರವೇಶ ಶುಲ್ಕವನ್ನು ವಸೂಲು ಮಾಡಲಾಗುತ್ತಿದೆ. ಇದರಿಂದ ಪಾಲಿಕೆಗೆ ಕಳೆ ವರ್ಷ ರೂ.1,20,372/- ಗಳು ಹಣ ಸಂಗ್ರಹವಾಗಿರುತ್ತದೆ. ಆದರೆ, ಈ ರೀತಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ದಕ್ಷಿಣ ವಿಭಾಗದ ಯಾವುದೇ ಉದ್ಯಾನವನಗಳಲ್ಲಿ ಪ್ರವೇಶ ಶುಲ್ಕ ನಿಗಧಿಪಡಿಸಿರುವುದಿಲ್ಲ. ಸದರಿ ಉದ್ಯಾನವನದ ಪ್ರವೇಶಕ್ಕಾಗಿ ಪಡೆಯುತ್ತಿರುವ ಪ್ರವೇಶ ಶುಲ್ಕವನ್ನು ತೆಗೆದುಕೊಳ್ಳುತ್ತಿರುವ ಬಗ್ಗೆ ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿರುತ್ತಾರೆ.

ಆದ್ದರಿಂದ, ಈ ಉದ್ಯಾನವನದಲ್ಲಿ ಸಾರ್ವಜನಿಕರಿಂದ ಈಗ ತೆಗೆದು ಕೊಳ್ಳುತ್ತಿರುವ ಪ್ರವೇಶ ಶುಲ್ಕವನ್ನು ನಿಲ್ಲಿಸಲು ಹಾಗೂ ಉದ್ಯಾನವನಕ್ಕೆ ಮುಕ್ತವಾಗಿ ಪ್ರವೇಶಕ್ಕೆ ಅವಕಾಶ ನೀಡುವ ಬಗ್ಗೆ ಅಗತ್ಯ ತೀರ್ಮಾನಕ್ಕಾಗಿ ಹಾಗೂ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:05-08-2011 ರ ಟಿಪ್ಪಣಿ.

**ನಿರ್ಣಯ :-** **ಮಾನ್ಯ ಆಯುಕ್ತರ ದಿನಾಂಕ:05-08-2011ರ ಟಿಪ್ಪಣಿಯನ್ನು ಒಪ್ಪಿದೆ.**

**2. ವಿಷಯ ಸಂಖ್ಯೆ:ತೋ/ಸ್ಥಾ/ಸ/18/11-12, ದಿನಾಂಕ: 12-08-2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 1177 ತೆರೆದ ಪ್ರದೇಶಗಳನ್ನು ಗುರುತಿಸಿದ್ದು, ಅವುಗಳಲ್ಲಿ 839 ತೆರೆದ ಪ್ರದೇಶಗಳನ್ನು ಉದ್ಯಾನವನಗಳನ್ನಾಗಿ ಅಭಿವೃದ್ಧಿ ಪಡಿಸಲಾಗಿದೆ. ಉಳಿದ 338 ತೆರೆದ ಪ್ರದೇಶಗಳನ್ನು ಉದ್ಯಾನವನಗಳನ್ನಾಗಿ ಅಭಿವೃದ್ಧಿ ಪಡಿಸಬೇಕಾಗಿದೆ. ಅಭಿವೃದ್ಧಿ ಪಡಿಸಿರುವ 839 ಉದ್ಯಾನವನಗಳನ್ನು ಬೆಳಿಗ್ಗೆ 5.30 ರಿಂದ 8.30 ರವರೆಗೆ ಮತ್ತು ಸಂಜೆ 4.00 ರಿಂದ 7.30 ರವರೆಗೆ ತೆರೆದು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ.

ಆದರೆ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗರವರ ಪತ್ರದ ಸಂಖ್ಯೆ : ಕರಾಮಹರ : ದೂರು : 03 : 2010-2011/871, ದಿನಾಂಕ:19-10-2010 ರ ಪತ್ರದೊಂದಿಗೆ ಲಗತ್ತಿಸಿರುವ **INTERIM ORDER** Dated:13.10.2010 ರ **Recommendations** ನ ಕ್ರಮ ಸಂಖ್ಯೆ(2)ರಲ್ಲಿ **Timings** :To enable children utilize the parks and playgrounds, it must be kept open from 7.00 am to 7.00 pm. Between 10.00 am to 4.00 pm it would be kept open exclusively for schools to bring in children after advance booking. This would ensure the maximum utilization of the parks and playgrounds to the benefit of children and would be in their best interests ಎಂದು ತಿಳಿಸಲಾಗಿದೆ.(ಪ್ರತಿ ಲಗತ್ತಿಸಿದೆ)

ಈ ಹಿನ್ನೆಲೆಯಲ್ಲಿ ಉದ್ಯಾನವನಗಳು ಮತ್ತು ಆಟದ ಮೈದಾನಗಳನ್ನು ಬೆಳಿಗ್ಗೆ 7.00 ರಿಂದ ಸಂಜೆ 7.00 ರವರೆಗೆ ತೆರೆಯುವ ಬಗ್ಗೆ ಹಾಗೂ ಮೊದಲೇ ಅನುಮತಿ ಪಡೆದು ಬರುವ ಶಾಲೆಗಳಿಗೆ (ಶಾಲಾ ಮಕ್ಕಳಿಗೆ) ಬೆಳಿಗ್ಗೆ 10.00 ರಿಂದ 4.00 ರವರೆಗೆ ಅವಕಾಶ ಕಲ್ಪಿಸುವ ಕುರಿತು ಕೌನ್ಸಿಲ್ ಸಭೆಯಲ್ಲಿ ಚರ್ಚಿಸಿ

ತೀರ್ಮಾನ ಕೈಗೊಳ್ಳಲು ಹಾಗೂ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:03–08–2011 ರ ಟಿಪ್ಪಣಿ.

<u>ನಿರ್ಣಯ:–</u> **ದಿನಾಂಕ:03–08–2011 ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಭಾಗಶಃ ಒಪ್ಪುತ್ತಾ, ಉದ್ಯಾನವನಗಳಿಗೆ ಬೆಳಿಗ್ಗೆ 5.00 ರಿಂದ 10.00 ಘಂಟೆವರೆಗೆ ಹಾಗೂ ಸಾಯಂಕಾಲ 4.30 ರಿಂದ 9.00 ಘಂಟೆಯವರೆಗೆ ವಾಯುವಿಹಾರಕ್ಕೆ ಮುಕ್ತ ಅವಕಾಶ ಕಲ್ಪಿಸಲು ಸಮಿತಿಯು ತೀರ್ಮಾನಿಸಿತು.**

### *3. ಸಂಖ್ಯೆ: ತೋ.ಸ್ಥಾ.ಸ./20/2011–12, ದಿನಾಂಕ: 12–10–2011*

*2011–12ನೇ ಸಾಲಿನಲ್ಲಿ ಸಸ್ಯಕ್ಷೇತ್ರಗಳ ನಿರ್ವಹಣೆ ಕಾಮಗಾರಿಗಳ ವಲಯವಾರು ವಿವರ.*

***<u>ನಿರ್ಣಯ</u> : ಮುಂದೂಡಲಾಗಿದೆ.***

### *4. ಸಂಖ್ಯೆ: ತೋ.ಸ್ಥಾ.ಸ./21/2011–12, ದಿನಾಂಕ: 12–10–2011*

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅರಣ್ಯ ಘಟಕದ ಉತ್ತರ ವಿಭಾಗದ ವ್ಯಾಪ್ತಿಗೆ ಬರುವ ನಾಲ್ಕು ವಲಯಗಳಾದ ಪೂರ್ವ, ಯಲಹಂಕ, ದಾಸರಹಳ್ಳಿ, ಮಹದೇವಪುರ ವಲಯಗಳಲ್ಲಿ 2011–12ನೇ ಸಾಲಿನಲ್ಲಿ ಅರಣ್ಯೀಕರಣ ಕಾಮಗಾರಿಗಳಾದ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿಗಳು ಋತುಮಾನಕ್ಕನುಗುಣವಾಗಿದ್ದು, ತುರ್ತು ಸಂದರ್ಭಾನುಸಾರ ನಿರ್ವಹಿಸ ಬೇಕಾಗಿರುವುದರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡಿದ್ದು, ಸದರಿ ಕಡತಗಳನ್ನು ಅರಣ್ಯ ಘಟಕದ ಉತ್ತರ ವಿಭಾಗದಿಂದ ಸಲ್ಲಿಸಿರುತ್ತಾರೆ.

ಆದ್ದರಿಂದ, ಈ ಕಡತಗಳಲ್ಲಿ 42,000 ಸಂಖ್ಯೆಯ ಸಸಿಗಳನ್ನು ನೆಟ್ಟು ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿಗೆ ಒಟ್ಟು ತಗಲುವ ಅಂದಾಜು ವೆಚ್ಚ ರೂ.84.00 ಲಕ್ಷಗಳಾಗಲಿದ್ದು, ಸದರಿ ಕಡತಗಳನ್ನು ತೋಟಗಾರಿಕೆ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಹಾಗೂ ಇದಕ್ಕೆ ತಗಲುವ ಅಂದಾಜು ವೆಚ್ಚಗಳಿಗೆ ಅನುದಾನವನ್ನು ಬಿಡುಗಡೆಗೊಳಿಸುವ ಸಲುವಾಗಿ, ಪ್ರಸ್ತಾವನೆಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 03–10–2011 ರ ಟಿಪ್ಪಣಿ.

**ನಿರ್ಣಯ :– ಮಾನ್ಯ ಆಯುಕ್ತರ ದಿನಾಂಕ: 03–10–2011ರ ಟಿಪ್ಪಣಿಯನ್ನು ಒಪ್ಪಿದೆ.**

### 5. ವಿಷಯ ಸಂಖ್ಯೆ:ತೋ/ಸ್ಥಾ/ಸ/ 22/ 11–12, ದಿನಾಂಕ: 12–10–2011

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅರಣ್ಯ ಘಟಕದ ಉತ್ತರ ವಿಭಾಗದ ವ್ಯಾಪ್ತಿಗೆ ಬರುವ ನಾಲ್ಕು ವಲಯಗಳಾದ ಪೂರ್ವ, ಯಲಹಂಕ, ದಾಸರಹಳ್ಳಿ, ಮಹದೇವಪುರ ವಲಯಗಳಲ್ಲಿ 2011–12ನೇ ಸಾಲಿನಲ್ಲಿ ಅರಣ್ಯೀಕರಣ ಕಾಮಗಾರಿಗಳಾದ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿಗಳು ಋತುಮಾನಕ್ಕನುಗುಣವಾಗಿದ್ದು, ತುರ್ತು ಸಂದರ್ಭಾನುಸಾರ ನಿರ್ವಹಿಸಬೇಕಾಗಿರುವುದರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡಿದ್ದು, ಸದರಿ ಕಡತಗಳನ್ನು ಅರಣ್ಯ ಘಟಕದ ಉತ್ತರ ವಿಭಾಗದಿಂದ ಸಲ್ಲಿಸಿರುತ್ತಾರೆ.

ಆದ್ದರಿಂದ, ಈ ಕಡತಗಳಲ್ಲಿ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿಗೆ ಅಗತ್ಯವಿರುವ 22,000 ಸಂಖ್ಯೆಯ ಮೆಟಲ್ ಟ್ರೀಗಾರ್ಡ್‌ಗಳ ಸರಬರಾಜಿನ ಕಾಮಗಾರಿಗೆ ತಗಲುವ ಅಂದಾಜು ವೆಚ್ಚ ರೂ.330.00 ಲಕ್ಷಗಳಾಗಲಿದ್ದು, ಸದರಿ ಕಡತಗಳನ್ನು ತೋಟಗಾರಿಕೆ ಸ್ಥಾಯಿ ಸಮಿತಿಯ

ಅನುಮೋದನೆಗಾಗಿ ಹಾಗೂ ಇದಕ್ಕೆ ತಗಲುವ ಅಂದಾಜು ವೆಚ್ಚಗಳಿಗೆ ಅನುದಾನವನ್ನು ಬಿಡುಗಡೆಗೊಳಿಸುವ ಸಲುವಾಗಿ, ಪ್ರಸ್ತಾವನೆಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 03–10–2011 ರ ಟಿಪ್ಪಣಿ.

<u>ನಿರ್ಣಯ</u> :– **ಮಾನ್ಯ ಆಯುಕ್ತರ ದಿನಾಂಕ: 03–10–2011ರ ಟಿಪ್ಪಣಿಯನ್ನು ಒಪ್ಪುತ್ತಾ, ಪೂರ್ವ ವಲಯ ಮತ್ತು ಮಹದೇವಪುರ ವಲಯಕ್ಕೆ ವೃಕ್ಷಕವಚಗಳನ್ನು ಸರಬರಾಜು ಮಾಡಿಕೊಳ್ಳಲು ಟೆಂಡರ್‌ನಲ್ಲಿ ಯಾರು ಭಾಗವಹಿಸದೇ ಇರುವುದರಿಂದ, ಜರೂರಾಗಿ ವೃಕ್ಷಕವಚಗಳನ್ನು ಸರಬರಾಜು ಮಾಡಿರುವ ಶ್ರೀ.ರಂಜೀದರ್ ಸಿಂಗ್ ಕನೂಜಾ ಎಂಬ ಗುತ್ತಿಗೆದಾರರಿಂದ ವೃಕ್ಷಕವಚಗಳನ್ನು ಸರಬರಾಜು ಮಾಡಿಕೊಂಡು, 60 ದಿವಸಗಳ ಅವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಸಮಿತಿಯು ತೀರ್ಮಾನಿಸಲಾಯಿತು.**

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆಗಳು ಮತ್ತು ನ್ಯೂನ್ಯತೆಗಳನ್ನು ಸರಿಪಡಿಸಲು ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವಹಿಸುವಂತೆ, ಮಾನ್ಯ ಆಯುಕ್ತರು ಕಾರ್ಯ ಪ್ರವೃತ್ತರಾಗಬೇಕೆಂದು ಕೋರುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/–
ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**<u>ಪ್ರತಿಯನ್ನು :–</u>**

- ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- *ವಿಶೇಷ ಆಯುಕ್ತರು (ಯೋಜನೆ) ರವರ ಗಮನಕ್ಕೆ ತರಲಾಗಿದೆ.*
- ಎಲ್ಲಾ ವಲಯ ಅಪರ/ ಜಂಟಿ ಆಯುಕ್ತರು (ಪೂರ್ವ/ ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ / ಯಲಹಂಕ/ ಮಹದೇವಪುರ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
- ಪ್ರಧಾನ ಅಭಿಯಂತರವರಿಗೆ ಕಳುಹಿಸಲಾಗಿದೆ.
- ಮುಖ್ಯ ಲೆಕ್ಕಾಧಿಕಾರಿಗಳಿಗೆ ಕಳುಹಿಸಲಾಗಿದೆ.
- ಉಪ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ) & (ದಕ್ಷಿಣ) ರವರಿಗೆ ಕಳುಹಿಸಲಾಗಿದೆ.
- ವಲಯ ಅರಣ್ಯಾಧಿಕಾರಿಗಳು (ಪೂರ್ವ/ ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಕಳುಹಿಸಲಾಗಿದೆ.
- *ತೋಟಗಾರಿಕೆ ಅಧೀಕ್ಷಕರು* (ಪೂರ್ವ/ ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಕಳುಹಿಸಲಾಗಿದೆ.
- ಕಛೇರಿ ಪ್ರತಿ